ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1060 / 2024.

ಪ್ರಾ.ಸಾ.: 1
ಚಾ.ಸಾ.: 1

ಹೆಸರು : ಮಮುಣಿ ಎಂ. ಎ
ತಂದೆಯ ಹೆಸರು : ಲೇಟ್ ಅಯ್ಯಣ್ಣ
ವಯಸ್ಸು : 66 ವರ್ಷ
ಉದ್ಯೋಗ : ವ್ಯವಸಾಯ
ವಿಳಾಸ : ಬೆಳ್ಳೂರು

... ................................................................................................. ...

ದಿನಾಂಕ 1 ನೇ ಫೆಬ್ರವರಿ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

1. ಚಾಸಾಃ 2 ರವರ ಪರಿಚಯ ಇರುತ್ತದೆ, ಅವರು ನನ್ನ ಪತ್ನಿ. ಆರೋಪಿ ಪರಿಚಯ ಇರುತ್ತದೆ,ಅವರು ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ದಿ. 24.03.2024 ರಂದು ಚಾಸಾ 2 ರವರಿಗೆ ಹುಷಾರಿಲ್ಲದ ಕಾರಣ ಅವರನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ಮನೆಗೆ ಬೀಗವನ್ನು ಹಾಕಿರುತ್ತೇನೆ. ಆ ಸಮಯದಲ್ಲಿ ಆರೋಪಿಯು ಮನೆಯ ಮುಂದೆ ಕೆಲಸ ಮಾಡಿಕೊಂಡು ಇದ್ದನು. ನಂತರ ಮ. 02.00 ಗಂಟೆಗೆ ಮನೆಗೆ ಬಂದು ನೋಡಿದಾಗ ಮನೆಯ ಕಬೋರ್ಡ್ ನಲ್ಲಿ ಇದ್ದ ಬಟ್ಟೆ ಕಾಟ್ರೆಜ್ ಬೀರು ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಆಗ ಗಾಡ್ರೇಜ್ ನಲ್ಲಿದ್ದ 24 ಗ್ರಾಂ ಬಂಗಾರದ 2 ಎಳೆಚೈನ್ ಕಾಣೆಯಾಗಿರುವುದು ಕಂಡು ಬಂತು. ನಂತರ ನಾವು ಮನೆಯ ಹಿಂಭಾಗ ಹೋಗಿ ನೋಡಿದಾಗ ಗೋಡೆಯ ಪಕ್ಕ ಇದ್ದ ಕಬ್ಬಿಣದ ಏಣಿ ಹತ್ತಿ ಮನೆಯ ಹಂಚನ್ನು ತೆಗೆದು, ಶೀಟನ್ನು ಮುರಿದು ಮನೆಯ ಒಳಗಡೆ ಹೋಗಿರುವುದು ಕಂಡು ಬಂದಿರುತ್ತದೆ. ಆ ಸಮಯದಲ್ಲಿ ಆರೋಪಿ ಅಲ್ಲಿ ಇರಲಿಲ್ಲ. ನಂತರ ನಾನು ಶ್ರೀಮಂಗಲ ಪೊ. ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ.

2. ದಿ. 15.04.2024 ರಂದು ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ. ದಿ. 27.04.2024 ರಂದು ನ್ಯಾಯಾಲಯದ ಆದೇಶದಂತೆ 24 ಗ್ರಾಂ ಎರಡು ಎಳೆ ಚಿನ್ನದ ಸರವನ್ನು ಶ್ರೀಮಂಗಲ ಪೊ. ಠಾಣೆಯಲ್ಲಿ ಸ್ವತ್ತು ಬಿಡುಗಡೆ ಮಹಜರ್ ಕ್ರಮ ಜರುಗಿಸಿ ನನ್ನ ಸ್ವಾಧೀನಕ್ಕೆ ನೀಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ದೂರು ಆಗಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಕೃತ್ಯ ಸ್ಥಳದ ಮಹಜರ್ ಆಗಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಸ್ವತ್ತು ಅಮಾನತು ಬಿಡುಗಡೆ ಮಹಜರ್ ಆಗಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಸಮಯದಲ್ಲಿ ತೆಗೆದ 7 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ. 4 ರಿಂದ ನಿ. ಪಿ. 10 ಎಂದು ಗುರುತಿಸಲಾಯಿತು. ಆರೋಪಿಯನ್ನು ದೃಶ್ಯ ಮಾಧ್ಯಮದಿಂದ ಹಾಜರುಪಡಿಸಿದ್ದನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ಮುಖ್ಯ ವಿಚಾರಣೆ ಃ ಮುಕ್ತಾಯ

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ. ಹೆಚ್. ಎನ್ ವಕೀಲರಿಂದಃ

1. ಆರೋಪಿಯೇ ಕೆಲಸ ಬೇಕೆಂದು ಕೇಳಿಕೊಂಡು ಬಂದಿರುತ್ತಾರೆ. ಆರೋಪಿ 9 ದಿನದಿಂದ ಕೆಲಸಕ್ಕೆ ಬಂದಿರುತ್ತಾರೆ. ಆರೋಪಿಯನ್ನು ದಿನಕೂಲಿ ಕೆಲಸಕ್ಕೆ ಒಪ್ಪಿಸಿ ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡಿರುತ್ತೇವೆ. ನಮ್ಮ ಮನೆಯ ಅಕ್ಕಪಕ್ಕ ಯಾವುದೇ ಮನೆಗಳು ಇರುವುದಿಲ್ಲ. ನನಗೆ ಒಟ್ಟು 8 ಎಕರೆ ಆಸ್ತಿ ಇದೆ. ನನ್ನ ತೋಟದ ಕೆಲಸ ಮಾಡಲು ಹೊರಗಿನ ಜನರು ಬಂದು ಹೋಗುತ್ತಾರೆ. ಆರೋಪಿಯನ್ನು ಕೆಲಸಕ್ಕೆ ಇಟ್ಟುಕೊಳ್ಳಬೇಕಾದರೆ ಅವರ ಗುರುತು ಪರಿಚಯ ದಾಖಲೆ ಪಡೆದುಕೊಂಡಿಲ್ಲ. ಆರೋಪಿಯು ಕೆಲಸಕ್ಕೆ ಸೇರಿದ ದಿನದಿಂದ ನಾವು ಯಾವುತ್ತೂ ಮನೆಯನ್ನು ಬಿಟ್ಟು ಹೋಗಿರುವುದಿಲ್ಲ. ನನ್ನ ಮನೆಯ ಪಕ್ಕದಲ್ಲಿ ಲೈನ್ ಮನೆಗಳು ಇದೆ. ಸದರಿ ಲೈನ್ ಮನೆಯಲ್ಲಿ ಆರೋಪಿ ವಾಸವಿದ್ದನು. ಅವನಿಗೆ ಊಟ ನಾವೇ ನೀಡುತ್ತಿದ್ದೆವು.

2. ಸಾಮಾನ್ಯವಾಗಿ ಯಾರೂ ಒಬ್ಬ ವ್ಯಕ್ತಿಗೆ ಮನೆ ಕೆಲಸಕ್ಕೆ ಸೇರಿಸಿಕೊಳ್ಳುವಾಗ ಅವರ ಬಗ್ಗೆ ವಿಚಾರಣೆ ಮಾಡುತ್ತೇವೆ ಎಂದರೆ ಸರಿ. ಆರೋಪಿಗೆ ವಿಚಾರಣೆ ಮಾಡಿದಾಗ ಆತನ ಕಾನೂರಿನಲ್ಲಿ ಕೆಲಸವನ್ನು ಈ ಹಿಂದೆ ಮಾಡುತ್ತಿದ್ದೆನು ಎಂದು ತಿಳಿಸಿರುತ್ತಾನೆ. ಆರೋಪಿಯು ಕೆಲಸವನ್ನು ಮಾಡುತ್ತಿರುವಾಗ ಒಂದು ದಿನಕ್ಕೆ ಒಂದು ಚೀಲ ಮೆಣಸನ್ನು ಕುಯ್ಯುತ್ತಿದ್ದನು. ಕುಯ್ಯುತ್ತಿದ್ದ ಮೆಣಸನ್ನು ಮನೆಯಲ್ಲೇ ಇಡುತ್ತಿದ್ದೆವು. ಕೃತ್ಯ ನಡೆದ ದಿನ ಆರೋಪಿಯು ಯಾವುದೇ ಮೆಣಸನ್ನು ಕುಯಿದ್ದಿರುವುದಿಲ್ಲ. ಆರೋಪಿ ಕಳ್ಳತನ ಮಾಡಿದ್ದಾನೆ ಎಂದು ಯಾವುದೇ ಪ್ರತ್ಯಕ್ಷ ಸಾಕ್ಷಿದಾರರು ನೋಡಿಲ್ಲ ಎಂದರೆ ಸರಿ. ಆದಿನ ನಾನು ಚಾಸಾ 2 ರವರನ್ನು ಕರೆದುಕೊಂಡು ಯತಿರಾಜ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ಹೋಗಿದ್ದ ಬಗ್ಗೆ ದಾಖಲಾತಿಯನ್ನು ತನಿಖಾಧಿಕಾರಿಗಳು ನನ್ನ ಕಡೆಯಿಂದ ಪಡೆದುಕೊಂಡಿಲ್ಲ. ನಾನು ಕೃತ್ಯ ನಡೆದ ದಿನ ಮ. 02.00 ಗಂಟೆಗೆ ಬಂದು ನಾನು ಮನೆಯನ್ನು ನೋಡಿರುತ್ತೇನೆ.

3. ಆ ದಿನ ನಾನು ಪೊಲೀಸ್ ಠಾಣೆಗೆ ದೂರನ್ನು ನೀಡಲು ಸಾಯಂಕಾಲ 05.00 ಗಂಟೆಗೆ ಹೋಗಿರುತ್ತೇನೆ. ಪೊಲೀಸರು ಸಾಯಂಕಾಲ 06.00 ಗಂಟೆಗೆ ಕೃತ್ಯ ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರ ಜೊತೆ ಆರೋಪಿ ವಾಸವಿದ್ದ ಲೈನ್ ಮನೆಗೆ ಹೋಗಿ ನೋಡಿದಾಗ, ಲೈನ್ ಮನೆ ತೆರೆದಿತ್ತು. ಆರೋಪಿ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ, ನಾನು ಆರೋಪಿ ಮೇಲೆ ಹೋರಿಸಿರುವ ಆರೋಪ ಒಂದು ಕಟ್ಟು ಕತೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದ ಕೃತ್ಯ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಮುಕ್ತಾಯ

<u>ಮರು ವಿಚಾರಣೆ : -</u> <u>ಮಾನ್ಯ ಸ ಸ ಅ ರವರಿಂದ</u> : -

1. ಚಿನ್ನದ ಚೈನ್ ಜೊತೆಯಲ್ಲಿ ಮತ್ತೇನು ಕಳ್ಳತನವಾಗಿತ್ತು ಎಂದರೆ ಸಾಕ್ಷಿಯು Philips radio ಸಹ ಕಳ್ಳತನವಾಗಿದೆ ಎಂದು ನುಡಿದಿರುತ್ತಾರೆ. ಅದು ಸಿಕ್ಕಿಲ್ಲ ಎನ್ನುತ್ತಾರೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ. ಹೆಚ್. ಎನ್ ವಕೀಲರಿಂದಃ

1. ಯಾವುದೇ ರೇಡಿಯೋ ಕಳ್ಳತನ ಆಗಿಲ್ಲ,ಆದ್ದರಿಂದ ಅದು ಸಿಕ್ಕಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.